PCR 11/2022
PW-1

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಪಿ.ಸಿ.ಆರ್ ನಂ.11/2022**

**ಹೆಸರು** :- **ಮಹೇಶ**

**ತಂದೆಯ ಹೆಸರು** :- **ಭದ್ರಯ್ಯಗೌಡ**

**ವಯಸ್ಸು** :- **49 ವರ್ಷ**

**ಉದ್ಯೋಗ** :- **ಕೂಲಿ ಕೆಲಸ**

**ಸ್ಥಳ** :- **ಹೊರನಾಡು**

**ದಿನಾಂಕಃ 19.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

ಆರೋಪಿಗಳಾದ ಪ್ರಶಾಂತ, ಶಬ್ಬೀರ್ ಖಾನ್, ಹೇಮಲತಾ, ಶೇಶಷ ಬಿನ್ ರಾಮಪ್ಪ, ಜಗದೀಶ, ಸತೀಶ, ಹರೀಶ, ಮಂಜುನಾಥ ವಿ.ಬಿ.ಪಾಟೀಲ್ ವೀರಭದ್ರಗೌಡ, ವಿಘ್ನೇಶ, ಮಂಗಳ, ಬಸವರಾಜಗೌಡ, ಶರಣಗೌಡ, ಸಿದ್ದುಗೌಡ, ಮಲ್ಲಿನಾಥ ಗೌಡ ಬಿನ್ ನಾಗರಾಜಗೌಡ ಇವರೆಲ್ಲರೂ ದಿಃ 27.10.2021 ನೇ ಬುಧವಾರ 9.10 ರ ಬೆಳಗ್ಗಿನ ಸಮಯಕ್ಕೆ ಗುಂಪು ಕಟ್ಟಿಕೊಂಡು ನಾವು ವಾಸವಾಗಿರುವ ತಾವರೇಹಳ್ಳಿ ಗ್ರಾಮದ ಖಾನೇಷುಮಾರಿ ನಂ.5 ರ ಪಶ್ಚಿಮ ಭಾಗದಲ್ಲಿ ಗುಂಪು ಕಟ್ಟಿಕೊಂಡು ಬಂದು ನಿಂತಿರುತ್ತಾರೆ. ನಾವು ಯಾಕೆ ಬಂದಿದ್ದೀರಿ ಎಂದು ವಿಚಾರಿಸಿದಾಗ ನ್ಯಾಯಾಲಯದ ಆದೇಶವಿದೆ, ನೀವು ಮನೆ ಬಿಟ್ಟು ಹೋಗುತ್ತೀರಾ ಅಥವಾ ನಾವು ಹೊರಗೆ ಹಾಕಬೇಕಾ ಎಂದು ಪ್ರಶ್ನೆ ಕೇಳಿದರು. ಆಗ ನಾವು ಆದೇಶದ ಪ್ರತಿಯನ್ನು ಕೆಳಿರುತ್ತೇವೆ. ನಮ್ಮ ಮೇಲೆ ಯಾವುದೇ ಆದೇಶ ಆಗಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಆಗ ನಾವು ಮನೆಯ ಒಳಗೆ ಹೋದಾಗ ನಮ್ಮನ್ನು ಹಿಂಬಾಲಿಸಿ ಮನೆ ಒಳಗೆ ಬಂದು ಅವಾಚ್ಯ ಶಬ್ಧಗಳಿಂದ ಬೈದು, ನಮ್ಮನ್ನು ಹೊಡೆದು, ನಮ್ಮನ್ನು ಪೊಲೀಸರಿಗೆ ಒಪ್ಪಿಸಿರುತ್ತಾರೆ. ನಂತರ ನಮ್ಮನ್ನು 10.00

ಗಂಟೆಗೆ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಪೋಲಿಸರು ನಮ್ಮನ್ನು 10.00 ಗಂಟೆಯಿಂದ ರಾತ್ರಿ 7.00 ರ ತನಕ ನಮ್ಮನ್ನು ಹಿಡಿದು ಬಂಧಿಸಿ ಇಟ್ಟುಕೊಂಡಿದ್ದರು. ನಂತರ ಕೋರ್ಟ್ ಅಮೀನರು ನಮ್ಮ ಮೇಲೆ ದೂರನ್ನು ಸಲ್ಲಿಸಿರುತ್ತಾರೆ. ನಂತರ ಪೋಲಿಸರು ನಮ್ಮನ್ನು ರಾತ್ರಿ 12.00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಜೈಲು ಕಸ್ಟಡಿಗೆ ತೆಗೆದುಕೊಂಡು ಹೋಗಿ ಜೈಲಿಗೆ ಸೇರಿಸಿರುತ್ತಾರೆ. ಅಲ್ಲಿ 6 ದಿನ ಬಂಧಿಸಿರುತ್ತಾರೆ. ನಂತರ ನಾವು ಜಾಮೀನಿನ ಮೇಲೆ ಹೊರಗೆ ಬಂದಿರುತ್ತೇವೆ. ನಂತರ ನಾವು ತಾವರೇಹಳ್ಳಿ ಗ್ರಾಮದ ನಮ್ಮ ಪಶ್ಚಿಮ ಭಾಗದ ವಾಸದ ಮನೆಗೆ ಹೋಗಿ ನೋಡಲಾಗಿ ನಮ್ಮ ಪಶ್ಚಿಮ ಭಾಗದ ವಾಸದ ಮನೆಗೆ ಹಿಂದುಗಡೆ ಬಾಗಿಲುಗಳನ್ನು ಬಂದು ಮಾಡಿ ಮುಂದುಗಡೆ ಬಾಗಿಲಿಗೆ ಬೀಗ ಹಾಕಿರುತ್ತಾರೆ. ನಮ್ಮ ಪಶ್ಚಿಮ ಭಾಗದ ವಾಸದ ಮನೆಯ ಮುಂದುಗಡೆಯ ಎಡಭಾಗಕ್ಕಿರುವ 2 ಅಂಕಣ ಸಣ್ಣ ಕೊಟ್ಟಿಗೆ ಮನೆಯಲ್ಲಿ ನಮ್ಮ ದಿನ ಬಳಕೆಯ ಕೆಲವು ಸಾಮಾನುಗಳನ್ನು ಹಾಕಿ ಇಟ್ಟಿರುತ್ತಾರೆ. ನಂತರ ನಾವು ಪೊಲೀಸ್ ಠಾಣೆಗೆ ಹೋಗಿ ವಿಚಾರಿಸಿದಾಗ ಪೋಲಿಸರು ದಿನ ಬಳಕೆ ಸಾಮಾನುಗಳನ್ನು ವಿ ಬಿ ಪಾಟೀಲ್ ಎನ್ನುವವರಿಗೆ ಹಸ್ತಾಂತರಿಸಿರುತ್ತೇವೆ ಎಂದು ಹೇಳಿರುತ್ತಾರೆ. ನಮ್ಮ ಮನೆಯ ದಿನ ಬಳಕೆಯ ಬಹುಪಯೋಗಿ ಮತ್ತು ಬೆಲೆ ಬಾಳುವ ಸಾಮಾನುಗಳನ್ನು ನ್ಯಾಯಾಲಯಕ್ಕೆ ಅಗತ್ಯವಾದ ದಾಖಲಾತಿಗಳನ್ನು, ನೊಂದಾವಣೆ ಮಾಡಿದ ದಾಖಲಾತಿಗಳನ್ನು, ಉಚ್ಛ ನ್ಯಾಯಾಲಯ ಬೆಂಗಳೂರು, ಸರ್ವೋಚ್ಚ ನ್ಯಾಯಾಲಯದ ದೆಹಲಿಗೆ ಸಂಬಂಧಪಟ್ಟ ಜಡ್ಜ್ ಮೆಂಟ್ ಗಳನ್ನು, ಆಧಾರ ಕಾರ್ಡ್, ಐಡಿ ಕಾರ್ಡ್, ಕಿಸಾನ್ ಕ್ರೆಡಿಟ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಹೀಗೆ ಹಲವಾರು ದಾಖಲಾತಿಗಳು ಅದರ ಜೊತೆಗೆ ಮೂರು ಬೆಲೆಬಾಳುವ ಚಿನ್ನದ ಸರ, 4 ಬಂಗಾರದ ಬೆಲೆಬಾಳುವ ಬಳೆಗಳು, ಒಂದು ದೊಡ್ಡ ಬಂಗಾರದ ಬೆಲೆಬಾಳುವ ಕೈಗಡಗ, ಬೆಳ್ಳಿಯ ಸಾಮಾನು, ಪೂಜೆಗೆ ಸಂಬಂಧಪಟ್ಟ ದೀಪ, ಮೂರ್ತಿ ಹೀಗೆ ಬೆಲೆಬಾಳುವ ಅಪಾರ

ಸಾಮಾಗ್ರಿಗಳ ಒಟ್ಟು ರೂ.86 ಲಕ್ಷ ಆಗುತ್ತದೆ. ನಂತರ 1 ನೇ ಆರೋಪಿತನು ನಮ್ಮ ಮನೆಯ ಬೀಗವನ್ನು ವಿ.ಬಿ.ಪಾಟೀಲ್ ರವರಿಗೆ ನೀಡಿ, ಮನೆಯ ಸ್ವಾಧೀನವನ್ನು ಅವರಿಗೆ ವಹಿಸಿಕೊಟ್ಟಿರುತ್ತೇವೆ ಎಂದು ಹೇಳಿ ಅಲ್ಲಿ ಇರುವ ಮನೆಗೆ ಹೋದರೆ ಬಳ್ಳಾರಿ ಜೈಲಿಗೆ ಕಳುಹಿಸಿಕೊಡುತ್ತೇವೆ ಎಂದು ನಮ್ಮಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡಿರುತ್ತಾರೆ. ನಂತರ ಪೊಲೀಸರು ನಮಗೆ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿ ಎಂದು ಹೇಳಿರುತ್ತಾರೆ. ನಾವು ಅಮಲ್ಜಾರಿ ನಂ.28/2018 ರಲ್ಲಿ ಆದಂತಹ ಆದೇಶದ ವಿರುದ್ಧ ಸಾಗರದ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ. ಅದು ಇನ್ನೂ ಚಾಲ್ತಿಯಲ್ಲಿರುತ್ತದೆ. ನಂತರ ನಾವು ಈ ಖಾಸಗಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇವೆ. ಇದೇ ಮನೆಯಲ್ಲಿ ನಮ್ಮ ತಾಯಿಯವರು 90 ವರ್ಷ ಬಾಳಿ ಈ ಘಟನೆ ನಡೆಯುವ 1 1/2 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನ್ಯಾಯಾಲಯದಿಂದ ನೋಟಿಸ್, ವಾರೆಂಟ್ ನಮಗೆ ಬಂದಿರುವುದಿಲ್ಲ. 10 ನೇ ಆರೋಪಿಯು ಇದೇ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ವಿರುದ್ಧ ದಾವೆಯನ್ನು ದಾಖಲಿಸಿರುತ್ತಾನೆ. ಅದು ಈಗ ಚಾಲ್ತಿಯಲ್ಲಿರುತ್ತದೆ. ಅಸಲು ದಾವಾ ನಂ.13/2018 ಆಗಿರುತ್ತದೆ. ಸದರಿ ಕೇಸು ಚಾಲ್ತಿಯಿರುವಾಗ ನಮ್ಮ ಮೇಲೆ ಅಮಲ್ಜಾರಿ ನಂ.28/2018 ನ್ನು ದಾಖಲಿಸಿ ನಮ್ಮ ಮೂಲಕ ಒತ್ತಾಯದಿಂದ ಸ್ವತ್ತನ್ನು ವಶಪಡಿಸಿಕೊಂಡಿರುತ್ತಾರೆ. 4 ನೇ ಆರೋಪಿಯು ಇದೇ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಸಿ.ಸಿ. ನಂ.1833/2022 ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತಾರೆ.

10 ನೇ ಆರೋಪಿ ಮತ್ತು ನಮಗೂ ಆಸ್ತಿಗೆ ಸಂಬಂಧಪಟ್ಟಂತೆ ತಹಸೀಲ್ದಾರರು ಮತ್ತು ಪೋಲಿಸರು ರಿಸಿವರ್ ನೇಮಕಮಾಡಿರುತ್ತಾರೆ. ಅದರ ಆದೇಶದ ವಿರುದ್ಧ ನಾವು ಸಾಗರದ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ. ನಂತರ

ಮಾನ್ಯ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸಾಗರ, ಸರ್ವೆ ಮಾಡಿ ಗಡಿಗಳನ್ನು ಗುರುತು ಮಾಡಿ ಸ್ವಾಧೀನ ಪಡಿಸಬೇಕೆಂದು ನಿರ್ದೇಶಿಸಿರುತ್ತಾರೆ. ಆದರೆ ಅವರು ಇಲ್ಲಿಯವರೆಗೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಮ್ಮ ವಿರುದ್ಧ ನ್ಯಾಯಾಲಯದ ಯಾವುದೇ ಆದೇಶ ಆಗಿರುವುದಿಲ್ಲ. ನಾವು ಇರುವ ಪಶ್ಚಿಮ ಭಾಗದಲ್ಲಿ ನ್ಯಾಯಾಲಯದ ಆದೇಶ ಆಗಿದೆ ಎಂದು ಆದೇಶದ ಪ್ರತಿಯನ್ನು ನೀಡಿರುವುದಿಲ್ಲ. ಈ ಹಿಂದೆ ನಮ್ಮ ಮನೆಯ ಪೂರ್ವ ಭಾಗದಲ್ಲಿ ನ್ಯಾಯಾಲಯದ ಆದೇಶ ಪಡೆದುಕೊಂಡಿರುತ್ತೇವೆ ಎಂದು ತಿಳಿಸಿರುತ್ತಾರೆ. ಅದರಲ್ಲಿ ನಾವು ಪಕ್ಷಗಾರರಾಗಿರುವುದಿಲ್ಲ. ಈ ಮೊದಲು ನ್ಯಾಯಾಲಯದ ಅಮೀನರು ಸದರಿ ಆದೇಶದಲ್ಲಿ ನಮ್ಮ ಹೆಸರು ಇಲ್ಲದ ಕಾರಣ ಹಾಗೂ ಈ ಪೈಕಿ ಪೂರ್ವ ಭಾಗದ ವಾಸದ ಮನೆ ನಮೂದಿಸಿರುವುರಿಂದ ಸ್ವಾಧೀನ ಕೊಡಲು ಬರುವುದಿಲ್ಲ ಎಂದು ಹೇಳಿ 3 ಬಾರಿ ಬಂದು ಹೋಗಿರುತ್ತಾರೆ. ಒಂದು ವರ್ಷದ ನಂತರ ನ್ಯಾಯಾಲಯದ ಅಮೀನರು ಮೋಸದಿಂದ ಕಾರ್ಯಾಚರಣೆ ಮಾಡಿ ನಮ್ಮನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ. ಸದರಿ ಮೋಸದ ಕಾರ್ಯಾಚರಣೆಯಿಂದ 83 ಲಕ್ಷ ರೂಪಾಯಿ ದಿನಬಳಕೆಯ ಸಾಮಾನುಗಳನ್ನು ಕಳೆದುಕೊಂಡಿರುತ್ತೇವೆ. ಯಾವುದೇ ನ್ಯಾಯಾಲಯದ ಆದೇಶ ಇಲ್ಲದೆ ನಮ್ಮ ಮೇಲೆ ಕ್ರಮ ಕೈಗೊಂಡಿರುವುದು ಕಾನೂನು ಬಾಹಿರವಾಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ಈ ಹಂತದಲ್ಲಿ ಪಿರ್ಯಾದಿದಾರರು 3 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–1 ರಿಂದ 3 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಪಿರ್ಯಾದಿದಾರರು ಮತ್ತೊಬ್ಬ ಸಾಕ್ಷಿದಾರರನ್ನು ಸಾಕ್ಷಿ ಮಾಡಿಸಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(**ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯಿತು**).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದ್ದಾರೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಸೊರಬ.